Reg. No. : ....................................

Name : ........................................

**FY-816**

**IMPROVEMENT / SUPPLEMENTARY EXAMINATION, OCTOBER – 2022**

Part – III

**KANNADA (Optional)**

Maximum : 80 Scores

Time : **2½** Hours

Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಅಂಕಿತ ಯಾವುದು ?
   (ರಾಮನಾಥ, ಕೂಡಲಸಂಗಮದೇವ, ಚೆನ್ನಮಲ್ಲಿಕಾರ್ಜುನ, ಸದಾಶಿವಗುರು)

2. 'ಕಣ್ಣ ಮುಂದೈತೆ ಕೈಲಾಸ' ಪಾಠಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ?
   (ಗದ್ಯ, ಜನಪದ ಕಾವ್ಯ, ಕೀರ್ತನೆ, ಕಾದಂಬರಿ)

3. ಬೇವನ್ನು ಯಾವುದರೊಂದಿಗೆ ಸೇರಿಸಿದರೆ ಫಲವಿಲ್ಲವೆಂದು ಪುರಂದರದಾಸರು ಹೇಳುತ್ತಾರೆ ?
   (ಹಾಲು, ನೀರು, ಬೆಲ್ಲ, ಸಕ್ಕರೆ)

4. 'ಬಾಶಿಂಗ ಬಲ' ಪಾಠಭಾಗದಲ್ಲಿ ಯಾವ ಊರಿನ ಆಡುಮಾತಿನ ಕನ್ನಡವನ್ನು ಬಳಸಲಾಗಿದೆ ?
   (ಮೈಸೂರು, ಮಂಗಳೂರು, ಧಾರವಾಡ, ಕಾಸರಗೋಡು)

**5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4 × 1 = 4)**

5. ಹೊರೆಯು – ಈ ಪದದ ಅರ್ಥವನ್ನು ಬರೆಯಿರಿ.

6. ಪ್ರಯಾಣ – ಈ ಸಂಸ್ಕೃತ ಪದದ ತದ್ಭವ ರೂಪವನ್ನು ಬರೆಯಿರಿ.

7. ದೀಪ್ತಿಯಂತಿರಬೇಕು – ಈ ಪದವನ್ನು ವಿಂಗಡಿಸಿ ಬರೆಯಿರಿ.

8. ಹಾಡು – ಈ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.

9. ಸೂರ್ಯ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಹೆಸರಿಸಿರಿ.

10. "ಬೆಳಗ್ಗಿನಿಂದಲೇ ಕಿತ್ತೂರ ಬಸ್ಸ್ಟ್ಯಾಂಡ್‌ನಲ್ಲಿ ಬಹಳಷ್ಟು ಜನರು ಸೇರಿದ್ದರು" – ಈ ವಾಕ್ಯದಲ್ಲಿ ಬಳಸಿರುವ ಅನ್ಯದೇಶೀಯ ಪದ ಯಾವುದು ?

**11 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5 × 2 = 10)**

11. ಕೆಳಗೆ ಕೊಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.
ವಚನ ಸಾಹಿತ್ಯದಲ್ಲಿ ಅನನ್ಯ ಸಾಧನೆಯನ್ನು ಮಾಡಿದ ಬಸವಣ್ಣನವರು 'ಭಕ್ತಿ ಭಂಡಾರಿ' ಯೆಂದೇ ಪ್ರಸಿದ್ಧರಾದವರು.

12. ಗ್ರಾಮ್ಯ ಭಾಷೆಯಲ್ಲಿರುವ ಕೆಳಗಿನ ಗದ್ಯಭಾಗವನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿ ಬರೆಯಿರಿ.
"ನಮ್ಮಣ್ಣನ ಮಗನ ಲಗ್ಗಣ ಕಾರೆ ಮುಂಜಾಲೇ ಇತ್ತರೀ .. .. ಹಾಂಗ ನೋಡಿದ್ರೆ ಯಾಳೇ ಆಗೇತಿ" ಅಂದಳು ಆಕಿ ಹೊಸಾ ಶೀರಿಯಾಕಿ.

13. ಮರಗಳನ್ನು ಕಡಿಯುವುದರಿಂದಾಗಿ ಪ್ರಕೃತಿಗೆ ಆಗುತ್ತಿರುವ ಹಾನಿಯನ್ನು ಜನರಿಗೆ ತಿಳಿಸಲು ಸೂಕ್ತವಾದ ಎರಡು ಘೋಷಣಾ ವಾಕ್ಯಗಳನ್ನು ರಚಿಸಿರಿ.

14. 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' – ಈ ಗಾದೆ ಮಾತಿನ ಅರ್ಥವನ್ನು ವಿಸ್ತರಿಸಿ ಬರೆಯಿರಿ.

15. ಮೋಸ ಹೋಗು – ಈ ಪದವನ್ನು ಬಳಸಿ ಸೂಕ್ತವಾದ ವಾಕ್ಯವೊಂದನ್ನು ರಚಿಸಿರಿ.

16. ನಮ್ಮ ಮನೆಗೆ ಬಂದವರಲ್ಲಿ ನಾವು ಹೇಗೆ ವರ್ತಿಸಬೇಕೆಂದು ಬಸವಣ್ಣನವರು ತಿಳಿಸುತ್ತಾರೆ ?

17. ಶುದ್ಧ ಭಕ್ತಿಗೆ ಆಕಾರವಿಲ್ಲವೆಂಬುದನ್ನು ಎಸ್.ವಿ. ಪರಮೇಶ್ವರಭಟ್ಟರು ತಮ್ಮ ವಚನದಲ್ಲಿ ಯಾವ ಉದಾಹರಣೆಗಳ ಮೂಲಕ ತಿಳಿಸಿದ್ದಾರೆ ?

18. 'ತಾನು ಉಣ್ಣದೆ ಪರರಿಗಿಕ್ಕದ ಧನವಿದ್ದೇತಕೆ' – ಕನಕದಾಸರ ಕೀರ್ತನೆಯಲ್ಲಿ ಬರುವ ಈ ಸಾಲಿನ ಆಶಯವೇನು ?

**19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4 × 4 = 16)**

19. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಸು.ರಂ. ಎಕ್ಕುಂಡಿ | ಬೆಳಸು |
| ಜಂಬಣ್ಣ ಅಮರಚಿಂತ | ಅಶ್ವತ್ಥಾಮ |
| ಅಂಬಿಕಾತನಯದತ್ತ | ಪೆಟ್ರೊಮ್ಯಾಕ್ಸ್ ಹೊತ್ತವರು |
| ಸವಿತಾ ನಾಗಭೂಷಣ | ಮೊದಲಗಿತ್ತಿ |

20. ಕೆಳಗೆ ನೀಡಲಾದ ವಚನದಲ್ಲಿ ವಚನಕಾರರು ಜನರ ಸ್ವಭಾವವನ್ನು ಹೇಗೆ ವಿಡಂಬಿಸಿದ್ದಾರೆ ?

ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು

ಅರವಟ್ಟಿಗೆ ಛತ್ರವು ತಮ್ಮದೆಂಬರು

ಎಲೆ ಪೈಯಿರ್ದೈದದಿರೆ, ಸುರಿವ ಮಳೆ ಸುರಿಸದಿದ್ದರೆ

ಅವರೇತರಲ್ಲಿ ನೀಡುವರಯ್ಯ ! ರಾಮನಾಥ

21. 'ಪೆಟ್ರೊಮ್ಯಾಕ್ಸ್ ಹೊತ್ತವರು' ಕವನದಲ್ಲಿ ಶ್ರಮಜೀವಿಗಳಾದ ಬಡವರ ಜೀವನವು ಹೇಗೆ ಚಿತ್ರಿತವಾಗಿದೆ ? ತಿಳಿಸಿರಿ.

22. ಅಳಿಮನದವನ ಭಕ್ತಿ ಹೇಗಿರುತ್ತದೆ ಎಂಬುದನ್ನು ವಚನಕಾರ ಯಾವ ಉದಾಹರಣೆಯ ಮೂಲಕ ಸ್ಪಷ್ಟಪಡಿಸಿದ್ದಾನೆ ? ಬರೆಯಿರಿ.

23. ಚಂದ್ರಗುಪ್ತನು ತನ್ನ ಬುದ್ಧಿವಂತಿಕೆಯಿಂದ ಪಂಜರದ ರಹಸ್ಯವನ್ನು ತಿಳಿದು ಬಂಧನದಿಂದ ಹೇಗೆ ಬಿಡುಗಡೆಗೊಂಡನು ? ಬರೆಯಿರಿ.

24. 'ಮಳೆಯ ದಯಮಾಡೊ' ಕೀರ್ತನೆಯಲ್ಲಿ ನೀರಿಗಾಗಿ ಕಷ್ಟಪಡುವವರ ಬಗ್ಗೆ ಹೇಗೆ ಮನಮುಟ್ಟುವಂತೆ ಹೇಳಲಾಗಿದೆ ? ಬರೆಯಿರಿ.

25. ಪುಣ್ಯಕೋಟಿ ಹಸುವಿನ ಪ್ರಾಮಾಣಿಕತೆಯು ಸಮಾಜಕ್ಕೆ ನೀಡುವ ಸಂದೇಶವೇನು ? ತಿಳಿಸಿರಿ.

**26 ರಿಂದ 32 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(5 × 6 = 30)**

26. 'ಮೊದಲಗಿತ್ತಿ' ಕವನದ ಆಶಯವನ್ನು ಬರೆಯಿರಿ.

27. 'ವೈಶಾಖ ಪೂರ್ಣಿಮಿಯ ಮಾರ್ತಂಡನುದಯಿಸಿದಂ' ಕಾವ್ಯಭಾಗದ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

28. 'ಬೇವು ಬೆಲ್ಲದೊಳಿಡಲೇನು ಫಲ' ಎಂಬ ಕೀರ್ತನೆಯಲ್ಲಿ ಕೀರ್ತನೆಕಾರರು ಸಮಾಜಕ್ಕೆ ನೀಡಿದ ಸಂದೇಶವೇನು ? ವಿವರಿಸಿ ಬರೆಯಿರಿ.

29. 'ಹೇಮಕೂಟದಿಂದ ಬಂದ ಮೇಲೆ' ಪಾಠಭಾಗದಲ್ಲಿ ಬಂದಿರುವ ಶಕುಂತಳೆಯ ಪಾತ್ರಚಿತ್ರಣ ಮಾಡಿರಿ.

30. ಅನ್ಯೋನ್ಯ ಪ್ರೀತಿಯಿಂದ ಜೀವನ ಸಾಗಿಸುತ್ತಿದ್ದ ನಾದಿರಾಳ ಕುಟುಂಬದಲ್ಲಿ ಒಮ್ಮೆಗೆ ಬದಲಾವಣೆ ಉಂಟಾಗಲು ಕಾರಣವೇನು ? 'ಚಂದ್ರಗಿರಿಯ ತೀರದಲ್ಲಿ' ಪಾಠಭಾಗದ ಆಧಾರದಲ್ಲಿ ಬರೆಯಿರಿ.

31. ಪೆಂಟಯ್ಯನ ಕನಸು ನನಸಾಗದೆ ಹೋದುದರ ಚಿತ್ರಣ 'ಪೆಂಟಯ್ಯನ ಅಂಗಿ' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ ? ಬರೆಯಿರಿ.

32. ಉತ್ರಾಜಿಯ ಜೀವನವು ದುರಂತಮಯವಾಗಲು ಕಾರಣವೇನು ? ಬರೆಯಿರಿ.

**33 ರಿಂದ 35 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(2 × 8 = 16)**

33. 'ಬಾಶಿಂಗ ಬಲ' ಕತೆಯಲ್ಲಿ ಹಳ್ಳಿಯ ಪರಿಸರದ ಮುಗ್ಧ ಮನಸ್ಸಿನ ಗಂಡು ಹೆಣ್ಣುಗಳಿಬ್ಬರ ಪ್ರಸಂಗವು ಹೇಗೆ ಸುಂದರವಾಗಿ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.

34. ಹಳೆಯ ತಲೆಮಾರು ಹಾಗೂ ಹೊಸ ತಲೆಮಾರುಗಳ ಜೀವನ ರೀತಿ 'ಬೆಳಸು' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

35. ಬಡ ಕುಟುಂಬವೊಂದರ ಬದುಕಿನ ಚಿತ್ರಣ 'ಅಶ್ವತ್ಥಾಮ' ಕವನದಲ್ಲಿ ಹೇಗೆ ಮನಕರಗುವಂತೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

---